RNU AIR DHARWAD

NOVEMBER 01, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

**ಮುಖ್ಯಾಂಶಗಳು:**

- **ಇಂದು, ನಾಡಿನಾದ್ಯಂತ,** 70ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮ.
- **ಸರ್ಕಾರಿ ಕಾರ್ಯಕ್ರಮಗಳಲ್ಲಿ,** ಪರಿಸರ ಸ್ನೇಹಿ ವಸ್ತುಗಳು ಹಾಗೂ ಕೆ.ಎಂ.ಎಫ್ ನಂದಿನಿ ಉತ್ಪನ್ನಗಳ ಬಳಕೆಗೆ, ಮುಖ್ಯಮಂತ್ರಿ ಆದೇಶ.
- **ಸರ್ದಾರ ವಲ್ಲಭ್ ಭಾಯಿ ಪಟೇಲ** ಅವರ, 150ನೇ ಜಯಂತ್ಯುತ್ಸವ; ರಾಜ್ಯಾದ್ಯಂತ, ಏಕತಾ ದಿವಸ್ ಹಾಗೂ ಏಕತಾ ಓಟ.
- **ನಾಡಿದ್ದು, 3ನೇ ತಾರೀಖಿನಿಂದ,** ಜಾನುವಾರುಗಳ ಕಾಲು–ಬಾಯಿ ರೋಗ ನಿಯಂತ್ರಣಕ್ಕೆ, ರಾಷ್ಟ್ರೀಯ ಲಸಿಕೆ ಅಭಿಯಾನ.

<><><>

**ಭಾಷಾವಾರು ಪ್ರಾಂತಗಳು** ರಚನೆಯಾಗಿ, ಕರ್ನಾಟಕ ರಾಜ್ಯೋದಯವಾದ ದಿನವಿಂದು. 1956ರ ನವೆಂಬರ್ 1 ರಂದು ಕನ್ನಡ ಭಾಷಿಕ ಪ್ರದೇಶಗಳನ್ನು ಒಗ್ಗೂಡಿಸಿ, ಚೆಲುವ ಕನ್ನಡ ನಾಡು ಉದಯಿಸಿ, ಇಂದಿಗೆ 70 ವರ್ಷಗಳು, ಪೂರ್ಣಗೊಂಡವು. ಕರ್ನಾಟಕ ಏಕೀಕರಣಕ್ಕೆ ಕಾರಣಕರ್ತರಾದ, ಆಲೂರು ವೆಂಕಟರಾಯರು, ಕವಿ ಗುರುರಾಜ ಭಟ್ಟರು, ಪಂಡಿತ ನರಸಿಂಹಾಚಾರ್ಯರು, ಶರಣ ಪರಂಪರೆಯ ಚಿಂತಕರು ಸೇರಿದಂತೆ, ಹಲವು ಗಣ್ಯರ ಕೊಡುಗೆಗಳನ್ನು ಸ್ಮರಿಸಿ, ನಾಡಿನಾದ್ಯಂತ ಗೌರವ ನಮನ ಸಲ್ಲಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ಸೇರಿದಂತೆ, ಸಾಹಿತ್ಯ ಲೋಕದ ಅನೇಕ ಗಣ್ಯರು, ನಾಡಿನ ಜನತೆಗೆ, ಕರ್ನಾಟಕ ರಾಜ್ಯೋತ್ಸವದ, ಶುಭಾಶಯ ಕೋರಿದ್ದಾರೆ. ಇಂದು ಬೆಳಗ್ಗೆ 9 ಗಂಟೆಗೆ, ಬೆಂಗಳೂರಿನ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಆಯೋಜಿತ, ಕನ್ನಡ ರಾಜ್ಯೋತ್ಸವದ ಪ್ರಧಾನ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಇಂದು ಸಂಜೆ 6 ಗಂಟೆ 30 ನಿಮಿಷಕ್ಕೆ, ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ, ವಿವಿಧ ಕ್ಷೇತ್ರಗಳ 70 ಜನ ಸಾಧಕರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಲಿದ್ದಾರೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಸಾಂಸ್ಕೃತಿಕ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಯಕ್ಷಗಾನ ಕ್ಷೇತ್ರದಲ್ಲಿ, ಕಳೆದ 25 ವರ್ಷಗಳಿಂದ ಭಾಗವತರಾಗಿ ಸೇವೆ ಸಲ್ಲಿಸಿರುವ, ಉತ್ತರಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕು, ಗೋಳಗೋಡು, ಕೃಷ್ಣ ಪರಮೇಶ್ವರ ಹೆಗಡೆ ಅವರು, ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ವಿಜಯನಗರ ಜಿಲ್ಲೆ, ಕೂಡ್ಲಿಗಿ ತಾಲೂಕು,** ಓಬಳ ಶೆಟ್ಟಿ ಗ್ರಾಮದ ಸೂಲಗಿತ್ತಿ, 104 ವರ್ಷದ ಈರಮ್ಮ, ಇಂದು ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಲಿದ್ದಾರೆ. 14 ಸಾವಿರಕ್ಕೂ ಹೆಚ್ಚು ಸುರಕ್ಷಿತ ಹೆರಿಗೆ ಮಾಡಿಸಿದ, ಹೆಗ್ಗಳಿಕೆ ಹೊಂದಿದ್ದಾರೆ. ವಿಜಯನಗರ ಜಿಲ್ಲೆ, ಹೊಸಪೇಟೆಯ ಹಿರಿಯ ಚಿತ್ರ ಕಲಾವಿದ, ಬಿ. ಮಾರುತಿ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಖುಷಿ ವ್ಯಕ್ತ ಪಡಿಸಿದ್ದಾರೆ.

<><><>

**ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿರುವ,** ಕೋಲಾರ ಜಿಲ್ಲೆ, ಮಂಚಂಡಹಳ್ಳಿಯ ಕೀಲುಕುದುರೆ, ಗಾರುಡಿ ಗೊಂಬೆಯ ಜಾನಪದ ಕಲಾವಿದ, ಎಂ. ತೋಪಣ್ಣ, ತಮ್ಮ ಹರ್ಷ ಹಂಚಿಕೊಂಡಿದ್ದು, ಹೀಗೆ..

<><><>

**ಪ್ರಾಚೀನ ಕನ್ನಡ ಭಾಷೆ** ಸಾಹಿತ್ಯವನ್ನು, ಇತರೆ ಭಾಷೆಗಳಿಗೆ ಅನುವಾದಿಸುವ ಅಗತ್ಯವಿದೆ; ಸ್ವಾಯತ್ತ ಸಂಸ್ಥೆಗಳು ಈ ನಿಟ್ಟಿನಲ್ಲಿ ಯೋಚಿಸಿ–ಯೋಜಿಸುವಂತಾಗಬೇಕು ಎಂದು, ಮೈಸೂರು ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರದ, ಯೋಜನಾ ನಿರ್ದೇಶಕ, ಎಂ.ಎಂ ತಳವಾರ ಹೇಳಿದ್ದಾರೆ. ಮೈಸೂರು, ಭಾರತೀಯ ಭಾಷಾ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ, ಶಾಸ್ತ್ರೀಯ ಕನ್ನಡ ಭಾಷಾ ಮಾನ್ಯತಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಉಪ ಕುಲಪತಿ, ಮಲ್ಲೇಪುರಂ ಜಿ. ವೆಂಕಟೇಶ ಮಾತನಾಡಿ, ಶರಣರು, ವಚನಕಾರರು ಜ್ಞಾನಕ್ಕೆ ಹೆಚ್ಚಿನ ಒತ್ತು ನೀಡಿ, ಕನ್ನಡ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ ಎಂದರು.

<><><>

**ಏಕ ಬಳಕೆ ಪ್ಲಾಸ್ಟಿಕ್ ನಿಂದ ತಯಾರಿಸಿದ,** ಕುಡಿಯುವ ನೀರಿನ ಬಾಟಲಿಗಳನ್ನು, ಸರ್ಕಾರಿ ಕಚೇರಿ, ಸಾರ್ವಜನಿಕ ಸಭೆ ಹಾಗೂ ಸಮಾರಂಭಗಳಲ್ಲಿ, ಬಳಸದಂತೆ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಪರಿಸರ ಸ್ನೇಹಿ ಪರಿಕರಗಳನ್ನು ಮಾತ್ರ ಬಳಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಸರ್ಕಾರದ ಎಲ್ಲ ಸಭೆ, ಸಮಾರಂಭಗಳಲ್ಲಿ, ಸರ್ಕಾರಿ ಸ್ವಾಮ್ಯದ ಕರ್ನಾಟಕ ಹಾಲು ಒಕ್ಕೂಟ, ಕೆ.ಎಂ.ಎಫ್ ತಯಾರಿಸಿದ, ನಂದಿನಿ ತಿನಿಸುಗಳನ್ನು ಮಾತ್ರ ಬಳಸುವಂತೆ, ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಸುಚಿಸಿದ್ದಾಗಿ, ಮುಖ್ಯಮಂತ್ರಿ ತಮ್ಮ ಎಕ್ಸ್ ಖಾತೆಯಲ್ಲಿ, ಪ್ರಕಟಿಸಿದ್ದಾರೆ.

<><><>

**ಉಕ್ಕಿನ ಮನುಷ್ಯ ಎಂದೇ ಖ್ಯಾತಿವೆತ್ತ,** ಸ್ವತಂತ್ರ ಭಾರತದ ಮೊದಲ ಗೃಹ ಮಂತ್ರಿ ಹಾಗೂ ಉಪ ಪ್ರಧಾನಿ, ಸರ್ದಾರ ವಲ್ಲಭ್ ಭಾಯಿ ಪಟೇಲ ಅವರ, 150ನೇ ಜಯಂತ್ಯುತ್ಸವವನ್ನು, ನಾಡಿನಾದ್ಯಂತ 'ಏಕತಾ ದಿವಸ್' ಹಾಗೂ 'ಏಕತಾ ಓಟ'ಗಳ ಮೂಲಕ, ಆಚರಿಸಲಾಯಿತು. ಕೇಂದ್ರ ಸಂವಹನ ಇಲಾಖೆ, ವಾರ್ತಾ ಮತ್ತು ಪ್ರಸಾರ ಸಚಿವಾಲಯದ, ಧಾರವಾಡ ಕಚೇರಿಯಿಂದ ಆಯೋಜಿಸಿದ್ದ, ಏಕತಾ ಓಟದಲ್ಲಿ, ಕೇಂದ್ರ ವಾರ್ತಾ ಶಾಖೆ ಅಧಿಕಾರಿ ಮುರಳೀಧರ ಕಾರಬಾರಿ ಏಕತಾ ಪ್ರತಿಜ್ಞೆ ಬೋಧಿಸಿದರು. ಬೀದರ ನಗರದಲ್ಲಿ, ಸರ್ದಾರ ವಲ್ಲಭ್ ಭಾಯಿ ಪಟೇಲ ಅವರ, ಭಾವಚಿತ್ರದ ಮೆರವಣಿಗೆ ಜರುಗಿತು. ಎನ್.ಸಿ.ಸಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೆಡೆಟ್‌ಗಳು ಸೇರಿದಂತೆ, ಶಾಲಾ, ಕಾಲೇಜು ವಿದ್ಯಾರ್ಥಿಗಳು, ಪಾಲ್ಗೊಂಡಿದ್ದರು. ವಿಜಯನಗರ ಜಿಲ್ಲೆ, ಹೊಸಪೇಟೆಯ ಐತಿಹಾಸಿಕ ಶ್ರೀ ಒಡಕರಾಯ ದೇವಸ್ಥಾನದಿಂದ, ಬಾಬಾ ಸಾಹೇಬ ಅಂಬೇಡ್ಕರ ವೃತ್ತದ ವರೆಗೆ, ಬಿಜೆಪಿ ಜಿಲ್ಲಾ ಘಟಕ, ಏಕತಾ ನಡಿಗೆ ಆಯೋಜಿಸಿತ್ತು. ಗದಗ ನಾಗಾವಿಯ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ, ಆಯೋಜಿಸಿದ್ದ ರಾಷ್ಟ್ರೀಯ ಏಕತಾ ದಿನಾಚರಣೆಗೆ, ಕುಲಸಚಿವ ಸುರೇಶ ನಾಡಗೌಡರ, ಸರ್ದಾರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಚಾಲನೆ ನೀಡಿದರು. ಹುಬ್ಬಳ್ಳಿಯ ಮೂರುಸಾವಿರ ಮಠದಿಂದ, ದುರ್ಗದ ಬೈಲ್ ವೃತ್ತದ ವರೆಗೆ, ಬಿಜೆಪಿ ಆಯೋಜಿಸಿದ್ದ, ಏಕತಾ ನಡಿಗೆಗೆ, ಶಾಸಕ ಮಹೇಶ ಟೆಂಗಿನಕಾಯಿ ಚಾಲನೆ ನೀಡಿದರು.

<><><>

**ರಾಷ್ಟ್ರೀಯ ಜಾನುವಾರು ರೋಗ** ನಿಯಂತ್ರಣ ಕಾರ್ಯಕ್ರಮದಡಿ, 8ನೇ ಸುತ್ತಿನ ಕಾಲು–ಬಾಯಿ ರೋಗಕ್ಕೆ, ಲಸಿಕೆ ನೀಡಿಕೆ ಮಾಸಿಕ ಅಭಿಯಾನ, ನಾಡಿದ್ದು 3 ನೇ ತಾರೀಖಿನಿಂದ, ಡಿಸೆಂಬರ್ 3 ರ ವರೆಗೆ, ಪಶು ಪಾಲನೆ ಇಲಾಖೆ ಆಯೋಜಿಸಿದೆ. ಉಚಿತ ಲಸಿಕಾ ಅಭಿಯಾನದ ಭಿತ್ತಿಪತ್ರವನ್ನು ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಬಿಡುಗಡೆಗೊಳಿಸಿ, ಹೈನುಗಾರರು ತಮ್ಮ 4 ತಿಂಗಳ ಮೇಲ್ಪಟ್ಟ ಎಲ್ಲ ಜಾನುವಾರುಗಳಿಗೆ, ಕಾಲು–ಬಾಯಿ ರೋಗ ತಡೆ ಲಸಿಕೆ ಹಾಕಿಸುವಂತೆ, ಕೋರಿದರು. ಕಲಬುರಗಿ ಜಿಲ್ಲೆಯಲ್ಲಿ, ಒಟ್ಟು 3 ಲಕ್ಷದ 37 ಸಾವಿರದ 933 ಜಾನುವಾರುಗಳಿದ್ದು, ಲಸಿಕೆ ನೀಡಲು, 412 ತಂಡಗಳನ್ನು ರಚಿಸಲಾಗಿದೆ. ಧಾರವಾಡ ಜಿಲ್ಲೆಯಲ್ಲಿ ಜಾನುವಾರು ಲಸಿಕೆ ನೀಡಿಕೆ ಅಭಿಯಾನಕ್ಕಾಗಿ, 100 ಜಾನುವಾರುಗಳ, ಸಾವಿರದ 779 ಬ್ಲಾಕ್ ಗಳನ್ನು ವಿಂಗಡಿಸಿ, 110 ತಂಡಗಳನ್ನು ರಚಿಸಲಾಗಿದೆ ಎಂದು, ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಎಸ್.ವಿ ಸಂತಿ ತಿಳಿಸಿದ್ದಾರೆ.

<><><>

**'ವಿಕಸಿತ ಭಾರತಕ್ಕಾಗಿ, ಸುದೃಢ ಯುವ ಜನತೆ'** ಧ್ಯೇಯದೊಂದಿಗೆ, ಇಂದು ಬೆಳಗ್ಗೆ 10 ಗಂಟೆಗೆ, ಬೆಂಗಳೂರು ಮಲ್ಲೇಶ್ವರಂನ ಚಂದ್ರಶೇಖರ ಅಝಾದ ಮೈದಾನದಲ್ಲಿ, ಸಂಸದರ ಕ್ರೀಡಾ ಮಹೋತ್ಸವ ಜರುಗಲಿದೆ. ಕೇಂದ್ರದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ಅವರು, ಕ್ರೀಡಾ ಮಹೋತ್ಸವ ಉದ್ಘಾಟಿಸಲಿದ್ದಾರೆ. ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಶಾಸಕ, ಸಿ.ಎನ್ ಅಶ್ವತ್ಥ ನಾರಾಯಣ ಉದ್ಘಾಟನಾ ಕಾರ್ಯಕ್ರಮದ, ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ಹುಬ್ಬಳ್ಳಿಯ ನೈಋತ್ಯ ರೇಲ್ವೆ** ಅಧಿಕಾರಿಗಳ ಸಂಘದಲ್ಲಿ ಆಯೋಜಿಸಿದ್ದ, ವಿಚಕ್ಷಣಾ ಜಾಗೃತಿ ಸಪ್ತಾಹದಲ್ಲಿ, ರೇಲ್ವೆ ಪೊಲೀಸ್ ನಿವೃತ್ತ ಅಪರ ಮಹಾ ನಿರ್ದೇಶಕ ಭಾಸ್ಕರ ರಾವ್ ಪಾಲ್ಗೊಂಡು, 'ವಿಚಕ್ಷಣಾ ಜಾಗೃತಿ: ನಮ್ಮ ಜವಾಬ್ದಾರಿ' ವಿಷಯದ ಕುರಿತು, ಮಾತನಾಡಿದರು. ಸಾರ್ವಜನಿಕ ಜೀವನದಲ್ಲಿ ಘನತೆ, ಪಾರದರ್ಶಕತೆ, ಕರ್ತವ್ಯ ಪರತೆಯ ಮಹತ್ವವನ್ನು ಅವರು ತಿಳಿಸಿದರು. ನೈಋತ್ಯ ರೇಲ್ವೆ ವಿಭಾಗೀಯ ಅಪರ ಮಹಾ ಪ್ರಬಂಧಕ, ಪಿ. ಅನಂತ ಪಾಲ್ಗೊಂಡಿದ್ದರು.

<><><>

**ಪುಟ್ಟಪರ್ತಿಯಲ್ಲಿ 23 ರಂದು ಜರುಗಲಿರುವ,** ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರ, 100ನೇ ಜಯಂತ್ಯುತ್ಸವದ ಹಿನ್ನೆಲೆ, ನೈಋತ್ಯ ರೇಲ್ವೆ, ಈ ತಿಂಗಳ 13 ನೇ ತಾರೀಖಿನಿಂದ, ಭಕ್ತಾದಿಗಳ ಅನುಕೂಲಕ್ಕಾಗಿ, ವಿಶೇಷ ರೈಲು ಸೇವೆ ಒದಗಿಸಲಿದೆ.

<><><>

**ಯುನೆಸ್ಕೋ ಮಾನ್ಯತೆ ಪಡೆದ,** ಐತಿಹಾಸಿಕ ಹಾಗೂ ಪಾರಂಪರಿಕ ತಾಣ, ಹಂಪಿಗೆ ಇಂದಿನಿಂದ, ಪ್ರವಾಸಿಗರ ಅನುಕೂಲಕ್ಕಾಗಿ, ವಿಮಾನ ಯಾನ ಸೇವೆ ಆರಂಭವಾಗಲಿದೆ ಎಂದು ವಿಜಯನಗರ ಜಿಲ್ಲೆ, ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ಪ್ರಭುಲಿಂಗ ತಳಕೇರಿ ತಿಳಿಸಿದ್ದಾರೆ. ಇಂದು ಬೆಳಗ್ಗೆ 7 ಗಂಟೆ 50 ನಿಮಿ 'ಕ್ಕೆ, ಬೆಂಗಳೂರಿನಿಂದ ಹೊರಡುವ ವಿಮಾನ, ಎಂಟು ಗಂಟೆ 40 ನಿಮಿ 'ಕ್ಕೆ, ತೋರಣಗಲ್ಲಿನ ವಿಜಯನಗರ ನಿಲ್ದಾಣಕ್ಕೆ ಆಗಮಿಸಲಿದೆ. ಬಳಿಕ, ಬೆಳಗ್ಗೆ ಒಂಬತ್ತು ಗಂಟೆ 10 ನಿಮಿ 'ಕ್ಕೆ ಹಂಪಿಯಿಂದ ನಿರ್ಗಮಿಸಿ, 10 ಗಂಟೆಗೆ ಬೆಂಗಳೂರು ತಲುಪಲಿದೆ.

<><><>

**ಕೊಡಗು ಜಿಲ್ಲೆ, ನಾಗರಹೊಳೆಯಲ್ಲಿ,** ಮಹರ್ಷಿ ಶ್ರೀ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯ, ನವೀಕೃತ ಕಟ್ಟಡವನ್ನು, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್ ಬೋಸರಾಜು ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್ ಪೊನ್ನಣ್ಣ ಉದ್ಘಾಟಿಸಿದರು. ಸಚಿವ ಬೋಸರಾಜು ಮಾತನಾಡಿ, 1 ಕೋಟಿ 80 ಲಕ್ಷ ರೂಪಾಯಿ ವೆಚ್ಚದಲ್ಲಿ, ಕಟ್ಟಡ ನವೀಕರಣ ಜತೆಗೆ, ಹೆಚ್ಚುವರಿ ಕೊಠಡಿ ನಿರ್ಮಾಣ, ಸೌರ ವಿದ್ಯುತ್ ಅಳವಡಿಕೆ, ಆಟದ ಮೈದಾನ, ರೇಲ್ವೆ ತಡೆಗೋಡೆ ನಿರ್ಮಾಣ ಸೇರಿದಂತೆ, ಹಲವು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಇಂದು, ನಾಡಿನಾದ್ಯಂತ,** 70ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮ.
**ಸರ್ಕಾರಿ ಕಾರ್ಯಕ್ರಮಗಳಲ್ಲಿ,** ಪರಿಸರ ಸ್ನೇಹಿ ವಸ್ತುಗಳು ಹಾಗೂ ಕೆ.ಎಂ.ಎಫ್ ನಂದಿನಿ ಉತ್ಪನ್ನಗಳ ಬಳಕೆಗೆ, ಮುಖ್ಯಮಂತ್ರಿ ಆದೇಶ.
**ಸರ್ದಾರ ವಲ್ಲಭ್ ಭಾಯಿ ಪಟೇಲ** ಅವರ, 150ನೇ ಜಯಂತ್ಯುತ್ಸವ; ರಾಜ್ಯಾದ್ಯಂತ, ಏಕತಾ ದಿವಸ್ ಹಾಗೂ ಏಕತಾ ಓಟ.
**ನಾಡಿದ್ದು, 3ನೇ ತಾರೀಖಿನಿಂದ,** ಜಾನುವಾರುಗಳ ಕಾಲು–ಬಾಯಿ ರೋಗ ನಿಯಂತ್ರಣಕ್ಕೆ, ರಾಷ್ಟ್ರೀಯ ಲಸಿಕೆ ಅಭಿಯಾನ.

<><><>